ಕಡೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 14ನೇ ಸೆಪ್ಟಂಬರ್ 1896ನೇ ಇಸವಿ.

ದಕ್ಷಿಣ ಕನ್ನಡಾಜಿಲ್ಲಾ ಪ್ರೊಬೇಷನರೀ ಡೆಪ್ಯೂಟಿ ಮಾಜಿಸ್ಟ್ರೇಟರವರಿಂದ ತಲ್ಪಿದ ಈ ಕೆಳಗೆ ಕಂಡ ನೋಟಿಸನ್ನು ಸಮಸ್ತರಿಗೂ ತಿಳಿಯತಕ್ಕ ಬಗ್ಗೆ ಪ್ರಚುರಪಡಿಸಿ ಇದೆ.

* * * *

ಹೆಚ್. ಹೆಚ್. ಸ್ಪಾರ್ಕ್ಸ್,
ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್.

ದಕ್ಷಿಣ ಕನ್ನಡಾಜಿಲ್ಲಾ ಪ್ರೊಬೇಷನರೀ ಡೆಪ್ಯೂಟಿ ಮಾಜಿಸ್ಟ್ರೇಟ್ ಪಿ. ಧೂರೆಸಾಮಿ ಅಯ್ಯಂಗಾರ್ರವರು ಎಲ್ಲಾ ಜನರಿಗೂ ತಿಳಿಯಪಡಿಸುವದೇನಂದರೆ,—ಈ ಕೋರ್ಟು ಪ್ರಥಮ ದರ್ಜೆಫ್ಟ್ ರಿಜಿಸ್ಟ್ರಿ ನಂ. 1–95 ನೇಕದ್ದ ಮೆಯಿ ಮುದ್ದೆಲೆ ಕಡೂರು ಡಿಸ್ಟ್ರಿಕ್ಟು ಮೂಡಿಗೆರೆ ತಾಲ್ಲೂಕು ಗೋವಬೀಡು ಯಂಬಲ್ಲಿರುವ ದೇವಭಟ್ಟನ ಮಗ ಸ್ಮಾರ್ತಬ್ರಾಹ್ಮಣ ಬ್ರಾಹ್ಮಣ ವೃತ್ತಿಯ ಎಚ್. ಕೃಷ್ಣರಾಯನ ಅಂಗಕೋಧನೆಯಲ್ಲಿ ಕಿಕ್ಕಿದ್ದಾಗಿ ಪೊಲೀಸಿನವರಿಂದ ಹಾಜರು ಪಡಿಸೋಣಾವ ಈ ಕೆಳಗೆ ಕಾಣಿಸಿದ ಜಿಂದಗಿಗಳೂ ಮತ್ತು ಆತನ ಬಾಬತು ಸದರೀ ನಂಬರಿನಲ್ಲಿ ಹಾಜರಾದ ವಸ್ತ್ರದ ತುಂಡುಗಳು ಈ ಕೋರ್ಟಿನಲ್ಲಿ ಅಮಾನತ್ತಿನಲ್ಲಿರುವದನ್ನು ಮಂಗ್ಳೂರು ಟೌನ್ ಮಾಜಿಸ್ಟ್ರೇಟರ ಬಳಿಗೆ ರವಾನಿಸಿರುತ್ತದೆ. ಅದಕ್ಕೆ ದಾವೆ ಉಳ್ಳವರು ಈ ನೋಟಿಸ್ ಜಿಲ್ಲಾ ಗೆಜೆಟ್ಟಿನಲ್ಲಿ ಘಾಯಿಷ್ಗುವ ತಾರೀಖಿನಿಂದ 6 ತಿಂಗಳ ಒಳಗೇ ಮಂಗ್ಳೂರು ಟೌನ್ ಮಾಜಿಸ್ಟ್ರೇಟರ ಮುಂದೆ ಹಾಜರಾಗಿ ದಾವೆ ಇದ್ದ ಪಕ್ಷದಲ್ಲಿ ಜಾಹಿರ್ಮಾಡಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಸದರೀ ಸೊತ್ತುಗಳು ಏಲಂ ಮಾಡಿ ಹುಟ್ಟಿ ಬಂದ ಐವಜನ್ನು ಸರಕಾರ್ ಲೆಖ್ತಕ್ಕೆ ದಾಖಲುಮಾಡಲಾಧೀತು.

ಜಿಂದಗಿ ವಿವರ.

ಹಳ್ತಿ ವಸ್ತ್ರದ ತುಂಡುಗಳು 1, ಲಿಫಾಪೆಯಲ್ಲಿ ಹಾಕಿ ಇಟ್ಟ ಕಾಗದ ಪತ್ರಗಳು, ನಶ್ಯದ ಡಬ್ಬಿ 1, ಕಂಚಿನ ಕಾಯಿದವತಿ 1, ಸ್ಟೀಲ್‌ಮನೆ ಸಮೇತ ಹೆಂಡ್ಲು 1, ಕಪ್ಪು ಪೆನ್ಸಿಲ್ ತುಂಡುಗಳು 2, ಕರ್ಪೂರನೂತಿನ ಸಂಣ ಕನ್ನಡಿ 1, ಕಬ್ಬಿಣದ ಬೀಗದಕೈ 1, ಡಿಂ ಮಿಣಿಚೀಲ 1, ತಾಂಬ್ರದ ಮಿನಲೇಟ್ 1, ನಗದಿ ಆಣೆ 4, ಪಾವಣಿಗೆಗಳು 6, ಪೈ 1, ಶಿಪ್ಪೆ ಇರುವ ಕಾಫೀ ಬೀಜ 1 ಸೇರಷ್ಟು ಆಧೀತು.

ಪಿ. ಧೂರೆಸಾಮಿ ಅಯ್ಯಂಗಾರ್,
ಡೆಪ್ಯೂಟಿ ಮಾಜಿಸ್ಟ್ರೇಟ್.

ನಗರದ ಡಿವಿಜ್ಞ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ ಈ 1896—97ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 59.

ಮೃತಪಟ್ಟ ನಾಗರಮಲ್ಲರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಚನ್ನಗಿರಿಯಲ್ಲಿರುವ ಮಾರ್ವಾಡಿ ಕೇಮಾಜಿ, ಮೃತಪಟ್ಟ ಸದರೀ ನಾಗರಮಲ್ಲರಿಗೆ ತಮ್ಮನು ಆಗಬೇಕೆಂಬ ಹಕ್ಕು ದಾರಿ ಮೇಲೆ ಚನ್ನಗಿರಿ ಸ್ಥಳದ ಕೇಮಾಜೀರು, ಜೋಧಿಪುರ ಜಿಲ್ಲಾ ಜೋಜಾವಾರದ ವಾಸಸ್ಥರಾಗಿ ಮೃತಪಟ್ಟ ನಾಗರಮಲ್ರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ಈ 1860ನೇ ಇಸವಿ 27ನೇ ಆಕ್ಟ್ಯ ವೇರೆಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೇಮಾಜೀರ ಅರ್ಜಿಯನ್ನು ಸ್ ಈ 1896ನೇ ಇಸವಿ ಅಕ್ಟೋಬರ್ ತಿಂಗಳ ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಕೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಗರಮಲ್ರಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ಈ 1896—97ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 61.

ಮೃತಪಟ್ಟ ಚಟ್ನಹಳ್ಳೀ ನಾಗಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಶಿವಮೊಗ್ಗಾ ತಾಲ್ಲೂಕು ಕಸಬಾ ಮಾಗಣಿ ಅನುಪಿನಕಟ್ಟೆ ವಾಸಸ್ಥಳಾದ ಚನ್ನಮ್ಮನು, ಮೃತಪಟ್ಟ ಸದರಿ ನಾಗಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕು ದಾರಿ ಮೇಲೆ ಅನುಪಿನಕಟ್ಟೇ ಸ್ಥಳದ ಚನ್ನಮ್ಮನು, ಅನುಪಿನಕಟ್ಟೆ ವಾಸಸ್ಥರಾಗಿ ಮೃತಪಟ್ಟ ನಾಗಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ಈ 1860ನೇ ಇಸವಿ 27ನೇ ಆಕ್ಟ್ಯ ವೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚನ್ನಮ್ಮನವರ ಅರ್ಜಿಯನ್ನು 1896ನೇ ಇಸವಿ ಅಕ್ಟೋಬರ್ ತಿಂಗಳ ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಗಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ಈ 1896ನೇ ಇಸವಿ ಆಗಸ್ಟ್ ತಿಂಗಳ ತಾರೀಖು 26ರಲ್ಲು ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣುಗಿದೆ.

ಬಿ. ತಿರುಮಲಾಚಾರ್,
ಡಿಸ್ಟ್ರಿಕ್ಟ್ ಜಡ್ಜ್.